4) ಮಾವು ಬೆಳೆಗಾರರ ಹಣ್ಣುಗಳನ್ನು ರಟ್ಟಿನ ಡಬ್ಬಗಳಲ್ಲಿ ಆಕರ್ಷಕವಾಗಿ ಪ್ಯಾಕ್ ಮಾಡಿ ಮಾರಾಟ ಮಾಡಲು ಸಬ್ಸಿಡಿ ನೀಡಲಾಗುತ್ತಿದೆ.

5) ರೈತರು ಮಾವಿನಹಣ್ಣುಗಳನ್ನು ಇಡಲು ಮತ್ತು ಸಾಗಾಣಿಕೆ ಮಾಡಲು ಅಗತ್ಯವಿರುವ ಪ್ಲಾಸ್ಟಿಕ್ ಕ್ರೇಟ್‌ಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ.

6) ಮಾವು ರಫ್ತು ಮಡಲು ಉದ್ದೇಶಿಶೆಸಿರುವ ರೈತರಿಗೆ ಪ್ಯಾಕ್‌ಹೌಸ್ ನಿರ್ಮಿಸಲು ಸಹಾಯಧನ ನೀಡಲಾಗುತ್ತಿದೆ.

7) ರಫ್ತು ಮಾಡಲು ರೈತರು ಪಡೆಯಬೇಕಾದ ಸಸ್ಯಶುಚಿತ್ವ ದೃಢೀಕರಣ ಪತ್ರ (ಫೈಟೋಸಾನಿಟರಿ ಸರ್ಟಿಫೀಕೇಟ್)ಗಳನ್ನು ವಿತರಿಸಲು ವಿಕೇಂದ್ರಿಕರಿಸಿ ಬೆಮಗಳೂರು, ಬೆಳಗಾವಿ, ಬಿಜಾಪುರ, ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ತೊಟಗಾರಿಕೆ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

8) ಕರ್ನಾಟಕ ರಾಜ್ಯದಲ್ಲಿ ಮಾವು ಕೃಷಿ–ರಫ್ತುವಲಯ ಯೋಜನೆ (Agri Export Zone) ಸ್ಥಾಪಿಸಿ ರೈತರಿಗೆ ರಫ್ತುಪ್ರಕ್ರಿಯೆ ಬಗ್ಗೆ ಸಂಪರ್ಕ/ಉತ್ತೇಜನ ನೀಡಲು ರೂ.41 ಕೋಟಿಗಳ ಒಂದು ಪ್ರಸ್ತಾವನೆಯನ್ನು ಭಾರತ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ.

9) ಕೋಲಾರ ಜಿಲ್ಲೆಯಲ್ಲಿ ರಫ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

10) ರಾಜ್ಯದಲ್ಲಿ 120ಕ್ಕೂ ಹೆಚ್ಚು ಮಾವಿನ ತಳಿಗಳನ್ನು **ಬೆಳೆಸಲಾಗುತ್ತಿದ್ದು** ಆದರೆ ಈಗ ಕೇವಲ 4 ತಳಿಗಳಾದ ರತ್ನಗಿರಿ ಆಲ್ಫಾನ್‌ಸೋ, ಬಂಗನಪಲ್ಲಿ, ಕೇಸರ್ ಮತ್ತು ಸ್ವಲ್ಪ ಪ್ರಮಾಣದಲ್ಲಿ ಮಲ್ಲಿಕಾ ಹಣ್ಣುಗಳು ರಫ್ತಾಗುತ್ತಿವೆ. ಇವುಗಳಲ್ಲಿ ರತ್ನಗಿರಿ ಆಲ್ಫಾನ್‌ಸೋ ಹೆಚ್ಚು ಪ್ರಸಿದ್ದವಾಗಿವೆ. ಉತ್ತಮ ತಳಿಗಳನ್ನು ರಫ್ತು ಮಾಡಲು ಕ್ರಮ ಕೈಗೊಳ್ಳಲಾಗುವುದು.

109 (36) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆ, ತರುವೇಕೆರೆ ತಾಲ್ಲೂಕಿಗೆ 2002–03. 2003–04, 2004–05ರ ಸಾಲುಗಳಲ್ಲಿ ಮೀನುಗಾರರಿಗೆ ಮೀನುಗಾರಿಕಾ ಇಲಾಖಾ ವತಿಯಿಂದ ಮಂಜೂರು ಮಾಡಲು ಉದ್ದೇಶಿಸಿದ್ದ ಮನೆಗಳ ಸಂಖ್ಯೆ ಎಷ್ಟು;
(ಕ್ಷೇತ್ರವಾರು ವಿವರ ಓದಗಿಸುವುದು);

ಆ) ಈ ಬಡ ಮೀನುಗಾರರಿಗೆ ಈಗಾಗಲೇ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಎಷ್ಟು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು): ಅ) ತುಮಕೂರು ಜಿಲ್ಲೆ, ತುರುವೆಕೆರೆ ತಾಲ್ಲೂಕಿಗೆ 2002–03ರಲ್ಲಿ 20 ಮನೆಗಳು, 2003–04ರಲ್ಲಿ 10 ಮನೆಗಳು ಹೀಗೆ ಒಟ್ಟು ಮೀನುಗಾರಿಕೆ ಇಲಾಖಾ ವತಿಯಿಂದ ಮತ್ಸ್ಯಾಶ್ರಯ ಯೋಜನೆಯಡಿ 30 ಮನೆಗಳನ್ನು ಮಂಜೂರು ಮಾಡಲಾಗಿದೆ. 2004–05ರಲ್ಲಿ ಯಾವುದೇ ಮನೆ ಹಂಚಿಕೆ ಮಾಡಿರುವುದಿಲ್ಲ.

ಆ) ಮಂಜೂರಾದ 30 ಮನೆಗಳನ್ನು ಈಗಾಗಲೇ ಮೀನುಗಾರರಿಗೆ ಹಂಚಿಕೆ ಮಾಡಲಾಗಿದೆ.